ಶ್ರೀಮತಿ ಯಶೋಧರ ದಾಸಪ್ಪ.—ಅವರೇ ಅದನ್ನು ಹಾಕಿರಬಹುದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಶ್ರೀ ಚೆಂಗಲರಾಯರೆಡ್ಡಿಯವರು ಇದಕ್ಕೆ ಅಡಿಪಾಯ ಹಾಕಿದ್ದಾರೆ, ಈ ಕೆಲಸವನ್ನು ಬೇಗ ಮುಗಿಸಬಾರದು ಎಂಬ ಒಂದು ಕಾರಣವನ್ನು ಬಿಟ್ಟರೆ ಈ ಕೆಲಸ ಇಷ್ಟು ನಿಧಾನವಾಗುವುದಕ್ಕೆ ಬೇರೇನು ಕಾರಣಗಳಿವೆಯೆಂಬುದನ್ನು ತಿಳಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಆ ಗ್ರಾಮದಲ್ಲಿ ಮೊದಲು ಅಲ್ಲಿ 100 ಮನೆಗಳಿದ್ದವು. ಅಲ್ಲಿ ಅವುಗಳಿಗೆ ಆಕಸ್ಮಿಕವಾಗಿ ಬೆಂಕಿ ಬಿತ್ತು. ಆಗ ಆ ಮನೆಗಳನ್ನು ಕಟ್ಟಿಸತಕ್ಕ ಕೆಲಸ ಪ್ರಾರಂಭವಾಯಿತು. ಅಲ್ಲಿ ಕೆಲವು ಜನಗಳಿಗೆ ಸಹಾಯ ಮಾಡಬೇಕೆಂದು ಕೋರಲಾಗಿತ್ತು. ಅನಂತರ ಅಲ್ಲಿ ಆ ಕೆಲಸವನ್ನು ಮುಂದುವರಿಸಲು ಒಬ್ಬ ಕಂಟ್ರಾಕ್ಟರನ್ನೂ ನೇಮಿಸಿಕೊಳ್ಳಲಾಗಿತ್ತು. ಸರ್ಕಾರದವರೂ ಸಹಾ 50 ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿದ್ದರು. ಆದರೆ ಸರ್ಕಾರದವರು ಒಂದು ಸಾವಿರದವರೆಗೆ ಖರ್ಚು ಮಾಡಿದಾಗ್ಲೂ ಅಲ್ಲಿರತಕ್ಕ ಜನಗಳಿಂದ ಒಂದು ಕಾಸೂ ಬರಲಿಲ್ಲ. ಹೀಗಾಗಿ ಸರ್ಕಾರದವರ ಹಣವಲ್ಲಿ 49 ಸಾವಿರ ಹಾಗೇ ಉಳಿಯಿತು. ಹೀಗಾಗಿ ಅಲ್ಲಿ ಮೊದಲು ಕಂಟ್ರಾಕ್ಟರು ಕಟ್ಟಿದ್ದ ಮನೆಗಳೂ ಬಿದ್ದು ಹೋದವು. ಅದೆಲ್ಲವನ್ನೂ ಈಗ ಪುನರ್ ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಕೆ. ಲಕ್ಕಪ್ಪ.—40 ಹರಿಜನರ ಮನೆಗಳನ್ನು ಕಟ್ಟುವುದಕ್ಕೆ ಸರ್ಕಾರಕ್ಕೆ 18 ವರ್ಷ ಬೇಕೇ, ಇದು ಸರ್ಕಾರದವರ ನೀತಿಯೇ ?

Mr. SPEAKER.—It is an observation rather than eliciting information.

ಶ್ರೀ ಪಿ. ವೆಂಕಟಗಿರಿಯಪ್ಪ.—ಆ ಹರಿಜನರ ಮನೆಗಳು ರಾಜಮಾರ್ಗದಲ್ಲಿವೆ. ಅವುಗಳನ್ನು ಕಿತ್ತು ಲಕ್ಷಣವಾಗಿ ಕಟ್ಟಿಸಿ ಕೊಡುತ್ತೇವೆಂದು ಹೇಳಿ, ಇದ್ದ ಮನೆಗಳನ್ನು ಕೆಡವಿ ಆ ಜನರನ್ನು ಬರದ ಕೆಳಗೆ ಇರುವಂತೆ ಮಾಡಿ ಇಲ್ಲಿಗೆ 18 ವರ್ಷಗಳಿಂದಲೂ ಅವರಿಗೆ ಮನೆಗಳನ್ನು ಕಟ್ಟಿಸಲು ಸಾಧ್ಯವಾಗದಿರುವುದು ಈ ಇಲಾಖೆಯ ದೌರ್ಬಲ್ಯತೆಯನ್ನು ತೋರಿಸುತ್ತಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು. ಈ ಕೆಲಸವನ್ನು ಕೈಗೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದ್ದರೂ ಸ್ಥಳದಲ್ಲಿರತಕ್ಕ ಜನರು ಮುಂದುವರಿಯುತ್ತಿಲ್ಲ. ಹಾಗೆ ಅವರು ಕೆಲಸಮಾಡದಿರುವುದರಿಂದ ನಿಧಾನವಾಗಿದೆ. ಕಂಟ್ರಾಕ್ಟರ ಕೆಲಸದಲ್ಲಿ ಬೇರೆ ರೂಪವಾಗಿದೆ. ಹೀಗೆ ಇದಕ್ಕೆ ನಾನಾ ಕಾರಣಗಳಿವೆ. ಅಲ್ಲಿ ಮನೆಗಳನ್ನು ಕಟ್ಟಿಸಬೇಕೆಂಬ ವೇಳೆಗೆ ತಮಗೆಲ್ಲರಿಗೂ ಗೊತ್ತಿರುವಂತೆ ಈ ಹೌಸಿಂಗ್ ಸ್ಕೀಂ ಬೇರೆ ನಿಂತುಹೋಯಿತು. ಆದರೆ ಈಗ ಉಳಿದಿರತಕ್ಕ ಮನೆಗಳನ್ನು ಕಟ್ಟಿಸಲು ಅದಕ್ಕೆ ಸಂಬಂಧಪಟ್ಟ ಫೈಲು ಹಣಕಾಸಿನ ಇಲಾಖೆಯಲ್ಲಿ ಪರಿಶೀಲನೆ ಆಗುತ್ತಿದೆ. ಅದನ್ನು ಆದಷ್ಟು ಬೇಗ ಕೈಗೊಳ್ಳಲಾಗುವುದು.

ಶ್ರೀ ಕೆ. ಲಕ್ಕಪ್ಪ.—18 ವರ್ಷಗಳಾದರೂ ಆ 42 ಮನೆಗಳನ್ನು ಕಟ್ಟಿನವೇ ಇರುವುದನ್ನು ನೋಡಿದರೆ ಸರ್ಕಾರದವರು ಹರಿಜನರ ಉದ್ಧಾರದ ನೀತಿಯನ್ನು ಕೈಬಿಟ್ಟಿಂತಾಗಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ತಮಗೆಲ್ಲರಿಗೂ ಗೊತ್ತಿರುವಂತೆ ಮೂರನೇ ಪ್ಲಾನಿನಲ್ಲಿ ಇದಕ್ಕೆ ಹಣವನ್ನು ಒದಗಿಸಿರಲಿಲ್ಲ. ಆದಾಗ್ಯೂ ಸರ್ಕಾರದವರು ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ಒದಗಿಸಿ ಕೆಲಸ ಮುಂದುವರಿಸತಕ್ಕ ಕಾಲದಲ್ಲಿ ಜನರೇ ಮುಂದೆ ಬರಲಿಲ್ಲ. ಆದ್ದರಿಂದ ಸರ್ಕಾರದವರು ತಮ್ಮ ನೀತಿಯನ್ನು ಎಂದೂ ಬದಲಾಯಿಸಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಇದನ್ನು ಯಾವಾಗ ಮುಗಿಸುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಆದಷ್ಟು ಬೇಗ ಕೆಲಸವನ್ನು ಪ್ರಾರಂಭಮಾಡಲಾಗುವುದು.

Scheme for the amelioration of the backward classes in Channarayapatna Taluk.

*Q.—321. Sri H. R. KESHAVA MURTHY (Gandasi).—

Will the Government be pleased to state :—

(a) whether they have sanctioned any scheme for the amelioration of the backward classes in Channarayapatna Taluk, Hassan District;

(SRI H. R. KESHAVA MURTHY)

(*b*) whether they have for ned any new village for this purpose, and if so, the name of that village ;

(*c*) the number of houses constructed and the number of families now residing there ;

(*d*) the amount so far sanctioned and spent for the above villages ;

(*e*) the nature of amelioration provided for that village ?

A.—Smt. YESHODHARA DASAPPA (Minister for Social Welfare).—

(*a*) Yes.

(*b*) Yes, a colony has been put up called the Udayapura Colony (Baladare Kaval).

(*c*) Houses constructed : 20
Families now Residing : 20

(*d*) Amount sanctioned : Rs. 29,200.
Amount spent : Rs. 20,895.

(*e*) 1 Housing
2 Economic Aid.
3 Drinking Water Wells.
4 C. C. building.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಸ್ತ್ರೀಯರಿಗೆ ಸರ್ಕಾರದವರು ಎಷ್ಟು ಹಣ ಬೇಕಾಗುವುದೆಂದು ಅಂದಾಜು ಮಾಡಿದ್ದರು ಮತ್ತು ಎಷ್ಟು ಹಣವನ್ನು ಸಹಾಯ ನೀಡುವುದಾಗಿ ಭರವಸೆ ಕೊಟ್ಟಿದ್ದರು.

†ಶ್ರೀಮತಿ ಯಶೋಧರ ದಾಸಪ್ಪ.—29 ಸಾವಿರ ರೂಪಾಯಿಗಳನ್ನು ಅಂದಾಜುಮಾಡಿ 20 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈ ಕೆಲಸದ ವಿಚಾರದಲ್ಲಿ ಒಂದು ಅವ್ಯವಹಾರ ನಡೆದು ಆ ಬಗ್ಗೆ ಒಂದು ಕಮಿಟಿಯನ್ನೂ ಸಹ ನೇಮಕ ಮಾಡಿದ್ದರ ಬಗ್ಗೆ ಮತ್ತು ಆ ಕಮಿಟಿಯ ವರದಿಯ ಬಗ್ಗೆ ಸರ್ಕಾರಕ್ಕೆ ಎಲ್ಲವೂ ಗೊತ್ತಾಗಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಸಮಿತಿಯ ವರದಿಯನ್ನೂ ನಮಗೆ ಬಂದಿಲ್ಲ, ಸರ್ಕಾರದವರು ಅದನ್ನೆಲ್ಲ ಪರೀಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ತಪ್ಪಿಸ್ಥರು ಇಂಥವರೇ ಎಂದು ದೃಢಪಟ್ಟರೆ ಸರ್ಕಾರದವರೇನು ಕ್ರಮ ಕೈಗೊಳ್ಳುವರು ?

ಶ್ರೀಮತಿ ಯಶೋಧರ ದಾಸಪ್ಪ.—ಇದು ಊಹಾಪೋಹದ ಪ್ರಶ್ನೆ ಇವಕ್ಕೆ ಉತ್ತರವಿಲ್ಲ.

ಶ್ರೀ ಎಸ್. ಶಿವಪ್ಪ.—ಅಲ್ಲಿ ತಾಲ್ಲೂಕ್ ಬೋರ್ಡಿನಿಂದ ಮನೆಕಟ್ಟಲು ಯಾರಿಗೆ ಹಣವನ್ನು ಕೊಡಲಾಗಿತ್ತೊ ಅವರ ಬದಲು ಬೇರೆ ಜನರು ಬಂದು ಅಲ್ಲಿ ವಾಸಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಆ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಅಂಥ ತಪ್ಪು ನಡವಳಿಕೆ ನಡವಿದ್ದರೆ ಆ ಬಗ್ಗೆ ಏನು ಕ್ರಮವನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಲಾಗುವುದು.

ಶ್ರೀ ಎಚ್. ಡಿ. ದೇವೇಗೌಡ.—ಹಾಲಿವಾಸಮಾಡುತ್ತಾ ಇರುವುದು 20 ಫ್ಯಾಮಿಲೀಸ್ ಎಂದು ತಿಳಿಸಿದ್ದೀರಿ. ಇದು ಸರಿಯಲ್ಲ ಇದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ ನೋಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿ ಮಂಜೂರು ಮಾಡಿರುವುದೇ 20 ಸಂಸಾರಕ್ಕೆ, ಅವಕ್ಕೆ ಹಣವನ್ನು ಕೊಟ್ಟಿದೆ. ಎಷ್ಟು ಜನ ಇದ್ದಾರೆ ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಏನು ಅನ್ಯಾಯಾಹಾರ ನಡೆದಿದೆ ಎಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಹೊಂದುವುದಕ್ಕೆ ಸರ್ಕಾರದವರು ಒಬ್ಬ ಅಧಿಕಾರಿಯನ್ನು ನೇಮಕ ಮಾಡಿ ಅದನ್ನು ವಿಮರ್ಶೆಮಾಡಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ನೇಮಕ ಮಾಡಿದ್ದೇವೆ, ಅದನ್ನು ಮಾಡುತ್ತಾ ಇದ್ದೇವೆ.

Crediting of enrolment fee collected from the members of Yelburga Taluk Land Mortgage Bank.

*Q.—337. Sri VEERABHADRAPPA ERAPPA (Yelburga).—

Will the Government be pleased to state :—

(*a*) whether it has come to their notice that the Director and the promoter of Yelburga Taluk Land Mortgage Bank have not credited the enrolment fee collected from the members of the aid Society to the Bank ;

(*b*) when and how much amount was collected and the number of persons from whom it was collected ;

(*c*) the action they have taken in this behalf ?

A.—Sri KONDAJJI BASAPPA (Deputy Minister for Co-operation).—

(*a*) Yes—by a promoter.

(*b*) A sum of Rs. 513-11 was collected from 47 persons during 28-1 1960 to 26-2-1960.

(c) The Society has been advised to obtain legal opinion as to the course of action to be pursued for recovery of the amount.

ಶ್ರೀ ವೀರಭದ್ರಪ್ಪ ಈರಪ್ಪ.—ಸ್ವಾಮಿ, ಈ ವಿಷಯ ಸರ್ಕಾರದವರ ಗಮನಕ್ಕೆ ಬಂದು ಎಷ್ಟು ದಿವಸ ಆಯಿತು ?

† ಶ್ರೀ ಕೊಂಡಜ್ಜಿ ಬಸಪ್ಪ.—ಸುಮಾರು ಎರಡು ಮೂರು ವರ್ಷ ಆಯಿತು.

ಶ್ರೀ ವೀರಭದ್ರಪ್ಪ ಈರಪ್ಪ.—ಇಷ್ಟು ದಿವಸ ಆದರೂ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ನಡೆದಿರುವುದು ಮುಂಚೆ ವಸೂಲು ಮಾಡಿರುವ ಹಣದ ಬಗ್ಗೆ, ಆದ್ದರಿಂದ ಇದು ರಿಜಿಸ್ಟ್ರಾರ್ ಅವರ ಪರ್ಯಾಲ್ಲಿ ಬರುತ್ತದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಒಂದು ಡಿಸ್ಪ್ಯೂಟ್ ಕೂಡ ಹಾಕಿ ಅದು ಡಿಸ್‌ಮಿಸ್ ಆಗಿದೆ 47 ಜನ ಇಂಡಿವಿಜುಯಲ್ಸ್ ಸುಪ್ರೀಂಕ್ಕೆ ಬಂದಿದ್ದಾರೆ. ಆದ್ದರಿಂದ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಜಿ. ಎ. ಗೌಡ.—ಈಗಲೂ ಕೂಡ ಅವರನ್ನು ಡೈರೆಕ್ಟರ್ ಆಗಿ ನೇಮಕ ಮಾಡಿದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇದು ಮುಂಚೆ ಆದಂತಹ ಒಂದು ಪ್ರಸಂಗ.

ಶ್ರೀ ಆರ್. ಎಸ್. ಪಾಟೀಲ್.—ಅವರನ್ನು ಹಾಗೆಯೇ ಬಿಟ್ಟು ಬಿಡಲಾಗುತ್ತದೆಯೇ ಅಥವಾ ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಇವರು ಪ್ರಮೋಟರ್ಸ್ ಮಾಡಿರುವ ಕೆಲಸ. ಪ್ರಮೋಟರ್ಸ್ 47 ಜನರಿಂದ ವಸೂಲು ಮಾಡಿದ ಹಣವನ್ನು ಜಮಾ ಮಾಡಿಲ್ಲ. ಸೊಸೈಟಿ ರಿಜಿಸ್ಟ್ರರ್ ಆದವರಿಗೆ ಸೊಸೈಟಿಗಳಿಗೆ